# ಪರ್ಯಾಯ ಶೈಕ್ಷಣಿಕ ಯೋಜನೆ 2021–22

## 2. ಅನ್ನದ ಹಂಗು, ಅನ್ಯರ ಸ್ವತ್ತು

**ತರಗತಿ:7** **ಮಾಹೆ: ಸೆಪ್ಟಂಬರ್–2021** **ವಿಷಯ: ಕನ್ನಡ ಪ್ರಥಮ ಭಾಷೆ**

| ಕ್ರ.ಸಂ | ತಿಂಗಳು/ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 1. | ಸೆಪ್ಟೆಂಬರ್ ಮೊದಲ ವಾರ ಮತ್ತು ಎರಡನೇ ವಾರ | *ಗುಂಪು ಚಟುವಟಿಕೆಗಳ ನಿರ್ದೇಶನಗಳನ್ನು ಆಲಿಸಿ, ಅರ್ಥ ಮಾಡಿಕೊಂಡು ಆಂಗಿಕವಾಗಿ ಪ್ರತಿಕ್ರಿಯಿಸುವುದು | 1.ಶಾಲಾ ಪ್ರಾರ್ಥನಾ ಸಮಯದ ಚಟುವಟಿಕೆಗಳ ಮಾದರಿ.<br>ಸಾಲಿನಲ್ಲಿ ನಿಲ್ಲುವ, ಗುಂಪಿನ ನಾಯಕನು ನೀಡುವ ನಿರ್ದೇಶನಗಳಾದ ಸಾವಧಾನ್, ವಿಶ್ರಂಗಳ ಅರ್ಥೈಸಿಕೊಳ್ಳುವಿಕೆ, ಕೈಗಳ ಮತ್ತು ಕಾಲುಗಳ ಚಲನೆ ಬಗ್ಗೆ ನೀಡುವ ನಿರ್ದೇಶನಗಳನ್ನು ಆಲಿಸುವ, ಆಲಿಸಿದ ನಂತರ ಅರ್ಥೈಸಿಕೊಂಡು ಆಂಗಿಕವಾಗಿ ಪ್ರತಿಕ್ರಿಯಿಸುವ ಚಟುವಟಿಕೆಯನ್ನು ಮಾಡಿಸುವುದು.<br><br>2. ಸಾಮೂಹಿಕವಾಗಿ ಗುಂಪು ಓದು. ಗ್ರಂಥಾಲಯದಲ್ಲಿ ಎಲ್ಲಾ ಮಕ್ಕಳಿಗೂ ಪುಸ್ತಕಗಳನ್ನು ಹೇಗೆ ತೆಗೆದುಕೊಳ್ಳಬೇಕು? ಎಲ್ಲಿ ಕುಳಿತುಕೊಳ್ಳಬೇಕು? ಹೇಗೆ ಓದಬೇಕು? ಎಂಬುದರ ಬಗ್ಗೆ ನಿರ್ದೇಶನಗಳನ್ನು ನೀಡಿ ಅವರ ಆಂಗಿಕ ಪ್ರತಿಕ್ರಿಯೆಗಳನ್ನು ನೋಡಬಹುದು.<br>ಉದಾ: ಶಬ್ಧ ಮಾಡದೇ ಪುಸ್ತಕಗಳನ್ನು ತೆಗೆದುಕೊಳ್ಳುವುದು. ಓದುವುದು, ಸರದಿ ಪ್ರಕಾರ ವಾರ್ತಾಪತ್ರಿಕೆ ಓದುವುದು. | ಅವಲೋಕನ ಪಟ್ಟಿ<br><br>ಅವಲೋಕನ ಪಟ್ಟಿ<br><br>ಮೌಖಿಕ/ಲಿಖಿತ ಪ್ರಶ್ನೆಗಳು |

| | | | | |
|---|---|---|---|---|
| | | *ಶಾಲಾ ಕೈತೋಟ ನಿರ್ವಹಣೆಯ ನಿರ್ದೇಶನಗಳನ್ನು ಆಂಗಿಕವಾಗಿ ಅಭಿನಯಿಸಿ ತೋರಿಸುವರು.<br><br><br><br><br><br><br><br><br><br><br><br>* ಮಹಾಭಾರತದಲ್ಲಿ ಶಲ್ಯ ಹಾಗೂ ದುರ್ಯೋಧನನ ಪಾತ್ರವನ್ನು ಅರಿತುಕೊಳ್ಳುವರು<br>* " ಅಕ್ಕಿ ಮೇಲೆ ಆಸೆ, ನೆಂಟರ ಮೇಲೆ ಪ್ರೀತಿ"– ಗಾದೆಯನ್ನು ಮಕ್ಕಳು ಸಂಭಾಷಣೆಯ ಮೂಲಕ ತಿಳಿಯುವರು.<br><br><br><br><br>ಹೊಸ ಪದಗಳಿಗೆ ಅರ್ಥವನ್ನು ತಿಳಿಯುವರು | 3. ಶಾಲಾ ಕೈತೋಟ ನಿರ್ವಹಣೆಯ ಅಣಕು ಪ್ರದರ್ಶನ.<br>ಮಕ್ಕಳಿಗೆ ನಿರ್ದಿಷ್ಟವಾಗಿ ಜವಾಬ್ಧಾರಿಗಳ ಬಗ್ಗೆ ನಿರ್ದೇಶನ ನೀಡುವುದು.<br>ಅ) "ಸುರೇಶ ನೀನು ಗಿಡಗಳನ್ನು ನೆಡಲು ನೆಲ ಹದ ಮಾಡು"<br>ಆ) "ಮಾಲಿನಿ ನೀನು ಗಿಡಗಳನ್ನು ನೆಡು"<br>ಇ) "ರಹೀಮ್ ನೀನು ಗಿಡಗಳಿಗೆ ನೀರುಣಿಸಲು ಪಾತಿ ಮಾಡು"<br>ಈ) "ಪೀಟರ್ ನೀನು ನೀರು ಹಾಕು" –ಈ ಮೇಲಿನ ನಿರ್ದೇಶನಗಳನ್ನು ಮಕ್ಕಳು ಆಂಗಿಕ ಪ್ರತಿಕ್ರಿಯೆಗಳ ಮೂಲಕ ನೆರವೇರಿಸುತ್ತಾರೆ.<br>ಹೀಗೆ ಒಂದು ಆಟ, ಒಂದು ಚಟುವಟಿಕೆ ನಿರ್ವಹಣೆಗೆ ನೀವು ನೀಡುವ ನಿರ್ದೇಶನಗಳನ್ನು ಬದಲಾಯಿಸಿ ನೀಡಬಹುದು<br><br><br>ಚಟುವಟಿಕೆ 4 ಪಾತ್ರಾಭಿನಯ<br>"ಅನ್ನದ ಹಂಗು, ಅನ್ಯರಸ್ವತ್ತು"–ಪದ್ಯಾಂಶದ ಸಂಭಾಷಣೆ ರೂಪವನ್ನು ಮಕ್ಕಳಿಗೆ ನೀಡಿ ಅದನ್ನು ಅಭಿನಯದ ಮೂಲಕ ಪ್ರದರ್ಶಿಸಲು ತಿಳಿಸುವುದು.<br>ಅವರ ಆಂಗಿಕ ಪ್ರತಿಕ್ರಿಯೆಗಳನ್ನು ದಾಖಲಿಸಿಕೊಳ್ಳುವುದು.<br>ಸೂಚನೆ:<br>ಮೇಲಿನ ಚಟುವಟಿಕೆಗಳು ಸಲಹಾತ್ಮಕವಾಗಿದ್ದು ಶಿಕ್ಷಕರು ಸ್ಥಳೀಯ ಲಭ್ಯ ಸಂಪನ್ಮೂಲಗಳಿಗನುಸಾರ ಚಟುವಟಿಕೆಗಳನ್ನು ಆಯೋಜಿಸಬಹುದು.<br><br>ಚಟುವಟಿಕೆ 5 ಲೇಖಕರ ಪರಿಚಯ<br>"ಅನ್ನದ ಹಂಗು, ಅನ್ಯರಸ್ವತ್ತು"–ಗದ್ಯಭಾಗದ ಮಾದರಿ ಓದು ಗಟ್ಟಿ ಓದು ಮತ್ತು ಮೌನ ಓದು.<br><br>ಪದಗಳ ಅರ್ಥ: ದಾಕ್ಷಿಣ್ಯ–ಸಂಕೋಚ ಮರ್ಜಿ–ಇಷ್ಟ, ಶುಶ್ರೂಷೆ–ಉಪಚಾರ | ಅವಲೋಕನ<br><br>ಅವಲೋಕನ ಪಟ್ಟಿ<br><br><br><br><br><br><br><br><br><br>ಅವಲೋಕನ<br><br>ಅವಲೋಕನ ಪಟ್ಟಿ<br><br><br><br><br><br>ಪದಗಳ ಅರ್ಥ ತಿಳಿಸಿ.<br>ದಾಕ್ಷಿಣ್ಯ, ಮರ್ಜಿ,ಶುಶ್ರೂಷೆ |

| | | | | |
|---|---|---|---|---|
| | | ಪಠ್ಯದ ಸಾರಾಂಶವನ್ನು ಗ್ರಹಿಸುವರು. | ಮಹಾಭಾರತದ ಸಾಂದರ್ಭಿಕ ಪಾತ್ರಗಳ ಪರಿಚಯ<br>ಚಟುವಟಿಕೆ 6<br>ಗದ್ಯಭಾಗದ ಪಠ್ಯಾಂಶದ ಕುರಿತು ಮೌಖಿಕ ಮತ್ತು ಲಿಖಿತ ಪ್ರಶ್ನೆಗಳು | ಮೌಖಿಕ/ಲಿಖಿತ ಪ್ರಶ್ನೆಗಳು. |
| | | ಶಬ್ದಕೋಶವನ್ನು ಹೇಗೆ ಬಳಸಿಕೊಳ್ಳಬೇಕೆಂಬುದನ್ನು ಅರ್ಥೈಸಿಕೊಳ್ಳುವರು | ಚಟುವಟಿಕೆ 7<br>ಶಬ್ದಕೋಶ ಬಳಸಿ ಪುಟ ಸಂಖ್ಯೆ28ರಲ್ಲಿ ನೀಡಿರುವ ಹೆಸರುಗಳನ್ನು ಅಕಾರಾದಿಯಾಗಿ ಬರೆಯುವುದು. | ಅಭ್ಯಾಸದ ಹಾಳೆ |
| | | ವಿಭಕ್ತಿ ಪ್ರತ್ಯಯಗಳು | ವ್ಯಾಕರಣಾಂಶಗಳು<br>ವಿಭಕ್ತಿ ಪ್ರತ್ಯಯಗಳು<br>ಚಟುವಟಿಕೆ:<br>*ಕೆಳಗಿನ ವಾಕ್ಯಗಳನ್ನು ಓದಿ ವ್ಯತ್ಯಾಸ ಗುರ್ತಿಸಿ.<br>ಅ) ಇರುವೆಯು ಬಂದಿತು (ಇರುವೆ+ಯು)<br>ಆ) ಇರುವೆ ಬಂದಿತು<br>ಪುಟ ಸಂಖ್ಯೆ 29, 30, 31 ರಲ್ಲಿ ನೀಡಿರುವ ಕಲಿಕಾಂಶದ ಬಗ್ಗೆ ಶಿಕ್ಷಕರು ತಿಳಿಸಿಕೊಡುವುದು. | ಅವಲೋಕನ<br>ಅವಲೋಕನ ಪಟ್ಟಿ<br>ಅಭ್ಯಾಸದ ಹಾಳೆ |
| | | ಬಹುವಚನ<br>ಬಹುವಚನಕ್ಕೆ ಬಳಕೆಯಾಗುವ ಪ್ರತ್ಯಯಗಳು. | ಚಟುವಟಿಕೆ:<br>ಕೆಳಗಿನ ಪದಗಳಿಗೆ ಬಹುವಚನ ರೂಪ ಬರೆದು ಅದಕ್ಕೆ ಬಳಸಿರುವ ಪ್ರತ್ಯಯಗಳನ್ನು ಗಮನಿಸಿ.<br>ಚೆಂಡು–ಚೆಂಡುಗಳು (ಗಳು)<br>ಹುಡುಗಿ–ಹುಡುಗಿಯರು (ಅರು)<br>ಹುಡುಗ–ಹುಡುಗರು (ರು) | ಅಭ್ಯಾಸದ ಹಾಳೆ |

| | | | | |
|---|---|---|---|---|
| | | ವಾಕ್ಯದಲ್ಲಿ ಬಹುವಚನ ರೂಪ ಮತ್ತು ಕ್ರಿಯಾಪದ ರೂಪದ ಬಳಕೆ | ಚಟುವಟಿಕೆ:<br>ಕೆಳಗಿನ ವಾಕ್ಯಗಳಲ್ಲಿ ಅಡಿಗೆರೆ ಎಳೆದ ನಾಮಪದ ಮತ್ತು ಕ್ರಿಯಾಪದಗಳನ್ನು ಗಮನಿಸಿ<br><br>ಅ) ಹಕ್ಕಿ ಹಾರಿತು.<br>ಹಕ್ಕಿಗಳು ಹಾರಿದವು.<br><br>ಆ) ಹುಡುಗ ಶಾಲೆಗೆ ಹೋಗುತ್ತಾನೆ<br>ಹುಡುಗರು ಶಾಲೆಗೆ ಹೋಗುತ್ತಾರೆ<br>*ಬಹುವಚನ ಪ್ರತ್ಯಯ ಬಳಕೆಯಾದಾಗ ಕ್ರಿಯಾಪದದ ರೂಪದಲ್ಲಿ ವ್ಯತ್ಯಾಸವಾಗಿ<br>ಅಲ್ಲಿಯೂ ಬಹುವಚನ ರೂಪ ಬಳಕೆಯಾಗುತ್ತದೆ.<br>ಪುಟ ಸಂಖ್ಯೆ 33 ,34 ರಲ್ಲಿ ನೀಡಿರುವ ಅಭ್ಯಾಸ ಚಟುವಟಿಕೆ ನಿರ್ವಹಿಸುವುದು.<br><br>ಸೂಚನೆಗಳು: 1. “ಅನ್ನದ ಹಂಗು, ಅನ್ಯರ ಸ್ವತ್ತು” ಸಂವೇದ ಪಾಠದ ವೀಕ್ಷಣೆಯ ಸಂಬಂಧವನ್ನು ಬಳಸಿಕೊಳ್ಳಬಹುದು. ಜಠಣ ಣಣಥಜ ತಜಜಬಠ ಟಟಿಞ<br><br>2. ಶಿಕ್ಷಕರು ಸ್ವತಃ ಪರಿಣಾಮಕಾರಿ ಚಟುವಟಿಕೆಗಳನ್ನು ಆಯೋಜಿಸಿಕೊಳ್ಳಲು ಸ್ವತಂತ್ರರು.<br>3. ದೀಕ್ಷಾ ಆಪ್ನಲ್ಲಿ ದೊರೆಯುವ ಮೌಲ್ಯಮಾಪನ ಸಾಧನಗಳನ್ನು ಬಳಸಿಕೊಳ್ಳಬಹುದು.<br>4 “. ಸುಮೇರು”ವಿನಲ್ಲಿ ನೀಡಿರುವ ಚಟುವಟಿಕೆಗಳನ್ನು ನೀಡಬಹುದು. | ಚರ್ಚೆ<br><br>ಅವಲೋಕನ |

## ಗದ್ಯ: ಅನ್ನದ ಹಂಗು, ಅನ್ಯರ ಸ್ವತ್ತು

## ತರಗತಿ: 7 ಅಭ್ಯಾಸದ ಹಾಳೆ–1

**1 ಮಾತನಾಡುವ ಕ್ಷೇತ್ರ [ಮೌಖಿಕ].**

1) ಈ ಕಥೆಯಲ್ಲಿ ನಿಮಗೆ ಇಷ್ಟವಾದ ಒಂದು ಸಂಭಾಷಣೆಯನ್ನು ಅಭಿನಯಿಸಿ ತೋರಿಸಿ.

**2 ಈ ಕೆಳಗಿನ ಪ್ರಶ್ನೆಗಳಿಗೆ ಮೌಖಿಕವಾಗಿ ಉತ್ತರಿಸಿ.**

1) ಶಲ್ಯ ಯಾವ ದೇಶದ ರಾಜ?
2) ಮಾದ್ರಿಯನ್ನು ಯಾರು ಮದುವೆಯಾದರು?
3) ಶಲ್ಯ ಯಾರಿಗೆ ನೆರವಾಗಲು ತನ್ನ ಸೈನ್ಯವನ್ನು ಕರೆತಂದಿದ್ದ?
4) ಶಲ್ಯ ಯಾರ ಆತಿಥ್ಯವನ್ನು ಸ್ವೀಕರಿಸಿದನು?
5) ರಾಜಾತಿಥ್ಯದ ನಂತರ ದುರ್ಯೋಧನನು ಶಲ್ಯನಿಗೆ ಏನೆಂದು ಹೇಳುತ್ತಾನೆ?

**ತರಗತಿ:-7** **ಅಭ್ಯಾಸದ ಹಾಳೆ-2**

**1 ಈ ಪದಗಳಿಗೆ ಅರ್ಥ ಬರೆಯಿರಿ.**

1) ದಾಕ್ಷಿಣ್ಯ = ----------
2) ಶುಶ್ರೂಷೆ = ----------
3) ಸಾರಥಿ = ----------

**2 ಪುರಾಣದ ಪಾತ್ರಗಳನ್ನು ಕೆಳಗೆ ನೀಡಲಾಗಿದೆ ಈ ಹೆಸರುಗಳನ್ನು ಅಕಾರಾದಿಯಾಗಿ**
ಬರೆಯಿರಿ. ಪಠ್ಯಪುಸ್ತಕದ ಪುಟ ಸಂಖ್ಯೆ 28 ರಲ್ಲಿರುವ ಚಟುವಟಿಕೆ ಮಾಡಿಸುವುದು.

**3 ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1) ಶಲ್ಯನ ತಂಗಿಯ ಹೆಸರೇನು?
2) ಶಲ್ಯ ಸೇನೆಯ ಜೊತೆಯಲ್ಲಿ ಯಾವ ಪಟ್ಟಣಕ್ಕೆ ಹೊರಟನು?
3) ಮಾದ್ರಿಯ ಮಕ್ಕಳ ಹೆಸರೇನು?

**4 ಈ ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯದಲ್ಲಿ ಉತ್ತರಿಸಿ.**

1) ಶಲ್ಯನಿಗೆ ದಾರಿಯುದ್ದಕ್ಕೂ ದುರ್ಯೋಧನ ಮಾಡಿದ ಆದರಾತಿಥ್ಯದ ವ್ಯವಸ್ಥೆಗಳೇನು?

----------------------------------------------------

2) ಶಲ್ಯ ದುರ್ಯೋಧನನಿಗೆ ನೀಡಿದ ಭರವಸೆಗಳೇನು?

**5 ಈ ವಾಕ್ಯವನ್ನು ಯಾರು-ಯಾರಿಗೆ ಹೇಳಿದರು? ಘಳಿಸಿ**

1) "ನೀನೂ ಕೃಷ್ಣನಷ್ಟೇ ಒಳ್ಳೆಯ ಸಾರಥಿ"

2 "ನಿನ್ನ ಹೃದಯ ವೈಶಾಲ್ಯಕ್ಕೆ ಬೆರಗಾಗಿದ್ದೇನೆ"

## ಅಬ್ಯಾಸದ ಹಾಳೆ- 3

**1 ಇವು ಯಾವ ವಿಭಕ್ತಿಗೆ ಸೇರಿದೆ? ಆ ವಿಭಕ್ತಿಗೆ ಪ್ರತ್ಯಯಗಳು ಯಾವುದೆಂಬುದನ್ನು ಬರೆಯಿರಿ.**

| ಕ್ರ.ಸಂ | ವಾಕ್ಯಗಳು | ವಿಭಕ್ತಿ | ಪ್ರತ್ಯಯ |
|---|---|---|---|
| ಉದಾ: | ಸವಿತ ಶಾಲೆಯಿಂದ ಬಂದಳು. | ತೃತೀಯ | ಇಂದ |
| 1 | ತಾರಾ ಗಿಡವನ್ನು ನೆಟ್ಟಳು. | | |
| 2 | ರಾಜ ಮನೆಗೆ ಹೋದನು. | | |
| 3 | ಮೈಸೂರಿನಿಂದ ನನ್ನ ತಾತ ಬಂದರು. | | |
| 4 | ತಾಯಿ –ತಂದೆ-ಗುರುಗಳಿಗೆ ನಮಸ್ಕರಿಸಿ. | | |
| 5 | ಕೋಗಿಲೆಯು ಹಾಡುತ್ತಿದೆ. | | |
| 6 | ದೇವಸ್ಥಾನದಲ್ಲಿ ಪೂಜೆ ನಡೆಯುತ್ತಿದೆ. | | |
| 7 | ದೂರದ ಬೆಟ್ಟ ಕಣ್ಣಿಗೆ ಹತ್ತಿರ | | |

**2. ಈ ಕೆಳಗಿನ ಪದಗಳಿಗೆ ಸೂಕ್ತವಾದ ಬಹುವಚನ ರೂಪ ಬರೆಯಿರಿ.**

1) ಮನೆ = ________  2) ಕಾಲು = ____________

3)ಬಾಲಕ = _______  4) ಚಾಲಕಿ = __________

5) ಅಣ್ಣ = ____________  6) ಅತ್ತೆ = ____________

**3. ವಚನ ಬದಲಿಸಿ, ವಾಕ್ಯ ರಚಿಸಿ.**

ಮಾದರಿ:- ಕೋಗಿಲೆಯು ಇಂಪಾಗಿ ಹಾಡುತ್ತದೆ.

ಉತ್ತರ: ಕೋಗಿಲೆಗಳು ಇಂಪಾಗಿ ಹಾಡುತ್ತವೆ.

1) ಬಾಲಕ ಆಟವನ್ನು ಆಡುತ್ತಿದ್ದಾನೆ.

________________________

2) ಹಕ್ಕಿಯು ಬಾನಿನಲ್ಲಿ ಹಾರುತ್ತಿದೆ.

________________________

ವಿಷಯ: ಕನ್ನಡ ಪ್ರಥಮ ಭಾಷೆ

ಆರಿಸಿದ ಭಾಗ : ಸ್ವಾತಂತ್ರ್ಯ ಸ್ವರ್ಗ (ಪದ್ಯ)

| ಕ್ರ.ಸಂ | ತಿಂಗಳು/ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| | ಸೆಪ್ಟಂಬರ್ ಮಾಹೆಯ 3ನೇ ವಾರ | ಸ್ವಾತಂತ್ರ್ಯ ಸ್ವರ್ಗ:<br>ಕವಿತಾ ವಾಚನ<br><br>ಸ್ವಾತಂತ್ರ್ಯವೆಂದರೆ ನಾವು ನಮ್ಮ ಬಗ್ಗೆ, ನಮ್ಮವರ ಬಗ್ಗೆ, ನಮ್ಮ ನಾಡಿನ ಬಗ್ಗೆ, ಹೆಮ್ಮೆಯಿಂದ ತಲೆಯತ್ತಿ ನಡೆಯುವಂತೆ ಇರಬೇಕು ನಾವೆಲ್ಲಾ ಒಂದು ಎಂಬ ಭಾವನೆ, ಜೀವನ ಪ್ರೀತಿ, ಸಂತಸದ ದುಡಿಮೆ–ಬಗ್ಗೆ ಅರ್ಥೈಸುವುದು.<br>**ಸಾಮರ್ಥ್ಯ:**<br>ಕವಿತೆ, ಕಥೆ, ನಾಟಕ, ಪ್ರಬಂಧ, ಪ್ರಹಸನ ಇವುಗಳನ್ನು ಆಲಿಸಿ ಅರ್ಥಮಾಡಿಕೊಳ್ಳುವುದು.<br><br>ನಾಟಕವನ್ನು ಅರ್ಥೈಸಿಕೊಳ್ಳುವರು | 1 ಶಿಕ್ಷಕರು ಸ್ವಾತಂತ್ರ್ಯ ಸ್ವರ್ಗದ ಕವಿ ಪರಿಚಯ ಮಾಡಿಕೊಡುವರು.<br>2 ಶಿಕ್ಷಕರು ಪದ್ಯವನ್ನು ಹಾಡುವರು ಮಕ್ಕಳು ಆಸಕ್ತಿಯಿಂದ ಆಲಿಸುವರು.<br>3 ಕವಿತೆಯಲ್ಲಿ ಪ್ರಾಸಪದಗಳನ್ನು ಗುರುತಿಸುವರು<br>4 ಮೌಖಿಕ/ಲಿಖಿತ ಪ್ರಶ್ನೋತ್ತರಗಳು ಚರ್ಚೆ<br>ಪ್ರಶ್ನೆ: ಕವಿಯವರ ಆಶಯದಂತೆ 'ಸ್ವಾತಂತ್ರ್ಯದ ಸ್ವರ್ಗ' ಎಂದರೇನು?<br><br>**ಚಟುವಟಿಕೆ 1**<br>ಗ್ರಂಥಾಲಯ, ಪತ್ರಿಕೆ, ಶಾಲಾ ಪತ್ರಿಕೆಗಳಲ್ಲಿ ಬರುವ ಕವಿತೆ, ಕಥೆ, ನಾಟಕಗಳಲ್ಲಿ ಉತ್ತಮವಾದುದನ್ನು ಆಯ್ಕೆ ಮಾಡಿಕೊಂಡು ತರಗತಿಯಲ್ಲಿ ವಾಚಿಸುವುದು, ಓದುವುದು, ಅಭಿನಯಿಸಿ ಹೇಳುವುದು, ಮಕ್ಕಳನ್ನು ಆಲಿಸಲು ತಿಳಿಸುವುದು.<br><br>**ಚಟುವಟಿಕೆ 2**<br>ರೇಡಿಯೋದಲ್ಲಿ ಪ್ರಸಾರವಾಗಿರುವ ನಾಟಕ, ಪ್ರಹಸನಗಳಲ್ಲಿ ಮಕ್ಕಳ ವಯೋಮಾನಕ್ಕೆ ವಿಂಗಡಿಸಿಕೊಂಡು ಲಭ್ಯ, ಸ್ಥಳೀಯ ಸಂಪನ್ಮೂಲ ಬಳಸಿ ಆಲಿಸಲು ವ್ಯವಸ್ಥೆ ಮಾಡುವುದು | • ಮಕ್ಕಳಿಂದ ಕವಿತೆಯ ವಾಚನ<br>• ಪದಗಳ ಅರ್ಥವನ್ನು ಮೌಖಿಕವಾಗಿ ಪ್ರಶ್ನೆ ಮೂಲಕ ಕೇಳುವುದು.<br>ಮೌಖಿಕ/ಲಿಖಿತ ಪ್ರಶ್ನೆಗಳು<br><br>ಅವಲೋಕನ<br><br>ಅವಲೋಕನ |

| | | | | |
|---|---|---|---|---|
| | | | ಚಟುವಟಿಕೆ–3 | |
| | | ಪ್ರಬಂಧವನ್ನು ಆಲಿಸಿ ಅರ್ಥೈಸಿಕೊಳ್ಳುವರು | ಪ್ರಬಂಧ ವಿಷಯಗಳಾದ 'ಪರಿಸರ ರಕ್ಷಣೆ' 'ಜನಸಂಖ್ಯಾಸ್ಫೋಟದ ಪರಿಣಾಮಗಳು' 'ಶಬ್ದ ಮಾಲಿನ್ಯ' ಇವುಗಳನ್ನು ಮಾದರಿಯಾಗಿ ಒಬ್ಬ ವಿದ್ಯಾರ್ಥಿಯಿಂದ ಓದಿಸಿ. ನಂತರ ಆಲಿಸಿದ ಬಗ್ಗೆ ಮೌಖಿಕ/ಲಿಖಿತ/ಪ್ರಶ್ನೋತ್ತರ/ಚರ್ಚೆಗಳ ಮುಖೇನ ಅರ್ಥೈಸಿಕೊಂಡಿರುವುದರ ಬಗ್ಗೆ ದೃಢೀಕರಿಸಿಕೊಳ್ಳುವುದು. | ಮೌಖಿಕ/ಲಿಖಿತ ಪ್ರಶ್ನೆಗಳು |
| | | | ಚಟುವಟಿಕೆ–4 | |
| | | ಪದ್ಯದ ಸಾರಾಂಶವನ್ನು ಅರ್ಥೈಸಿಕೊಳ್ಳುವರು | ಪದ್ಯವೊಂದನ್ನು ವಿದ್ಯಾರ್ಥಿಗಳಿಗೆ ಆಡಿಯೋ ಮೂಲಕ ಆಲಿಸಲು ತಿಳಿಸಿ ಸಾರಾಂಶ ಬರೆಯಲು ತಿಳಿಸುವುದು.<br>ಉದಾ: ಕುವೆಂಪು ವಿರಚಿತ ನಮ್ಮ ಮನೆಯಲ್ಲೊಂದು ಪುಟ್ಟ ಪಾಪವಿರುವುದು. ಎತ್ತಿಕೊಳ್ಳಲು ಹೋದರದಕೆ ಕೋಪ ಬರುವುದು | ಪದ್ಯದಲ್ಲಿ ಬಂದಿರುವ ವಿಷಯಾಂಶಗಳ ಕುರಿತು ಚರ್ಚೆ,ಪ್ರಶ್ನೋತ್ತರ |
| | | ಸಮಾನಾರ್ಥಕ ಪದಗಳನ್ನು ಬರೆಯುವರು | ಭಾಷಾ ಚಟುವಟಿಕೆಗಳು<br>ಕೆಳಗಿನ ಪದಗಳಿಗೆ ಪದ್ಯದಲ್ಲಿರುವ ಸಮಾನಾರ್ಥಕ ಪದಗಳನ್ನು ಬರೆಯಿರಿ.<br>ಉದಾ: ಜಗ – ವಿಶ್ವ<br>ಪ್ರೀತಿ – ಪ್ರೇಮ ಇತ್ಯಾದಿ | ಅಭ್ಯಾಸ ಹಾಳೆ |

| | | | | |
|---|---|---|---|---|
| | | • ನೀಡಿರುವ ಪದಗಳ ಭಾವನಾಮ ರೂಪ ಬರೆಯುವರು.<br><br>• ವಾಕ್ಯದಲ್ಲಿ ತಪ್ಪಾದ ಪದಗಳನ್ನು ಸರಿಪಡಿಸಿ ಬರೆಯುವರು. | • ಕೆಳಕಂಡ ಪದಗಳಿಗೆ ಭಾವನಾಮ ರೂಪವನ್ನು ಬರೆಯಿರಿ.<br>ಮಾದರಿ:<br>ಸ್ವತಂತ್ರ – ಸ್ವಾತಂತ್ರ್ಯ<br>ವಿಶಾಲ – ವೈಶಾಲ್ಯ<br>ಕಠಿಣ – ಕಾಠಿಣ್ಯ<br>• ಕೊಟ್ಟಿರುವ ವಾಕ್ಯಗಳಲ್ಲಿರುವ ತಪ್ಪನ್ನು ಸರಿಪಡಿಸಿ ಬರೆಯಿರಿ.<br>1 ಅಕ್ಕಿ ಹಕ್ಕಿಯನ್ನು ತಿನ್ನುತ್ತದೆ.<br>ಹಕ್ಕಿ ಅಕ್ಕಿಯನ್ನು ತಿನ್ನುತ್ತದೆ.<br>2 ಅನ್ನ ಅಣ್ಣವನ್ನು ಉನ್ನುತ್ತಾನೆ.<br>______________________<br>3 ಬಾಲೆಯ ಹಣ್ಣವನ್ನು ಉನ್ನುತ್ತಾನೆ.<br>______________________<br><br>ಪುಟ ಸಂಖ್ಯೆ 67 ಚಟುವಟಿಕೆಗಳು<br>ಚಟುವಟಿಕೆ: ನಿಮ್ಮ ಶಾಲೆಯಲ್ಲಿ ಆಚರಿಸಿದ 'ಸ್ವಾತಂತ್ರ್ಯ ದಿನಾಚರಣೆ' ಯ ಬಗ್ಗೆ ನಿಮ್ಮ ಮಾತುಗಳಲ್ಲಿ ಬರೆಯಿರಿ.<br><br>ಸೂಚನೆ: ಶಿಕ್ಷಕರು ಮೇಲಿನ ಸಲಹಾತ್ಮಕ ಚಟುವಟಿಕೆಗಳಿಗೂ ಭಿನ್ನವಾದ, ಚಟುವಟಿಕೆಗಳನ್ನು ಆಯೋಜಿಸಿ ಕಲಿಕೆಯನ್ನುಂಟುಮಾಡಲು ಸ್ವತಂತ್ರರು. | ಅಭ್ಯಾಸ ಹಾಳೆ<br><br>ಅಭ್ಯಾಸ ಹಾಳೆ.<br><br>ಅವಲೋಕನ. |

## ಸ್ವಾತಂತ್ರ್ಯ ಸ್ವರ್ಗ [ಪದ್ಯ]

**7 ನೇ ತರಗತಿ** **ಅಭ್ಯಾಸ ಹಾಳೆ – 4**

1 **ಸೂಕ್ತ ಪ್ರಾಸ ಪದವನ್ನು ಗುರ್ತಿಸಿ ಬರೆಯಿರಿ.**

[ಕೃಪೆಯಿಂದಾಗಿ , ಕೈ ಚಾಚುತಿಹುದು , ಮುಂದುವರಿಯುವಲ್ಲಿ]

1) ಹೊರಬಹುದು = ______________________

2) ಹರಹಿನಲ್ಲಿ = ______________________

3) ನುಡಿಗಳಿಂದಾಗಿ = ______________________

11 **ಸಮಾನಾರ್ಥಕ ಪದಗಳನ್ನು ಹೊಂದಿಸಿ ಬರೆಯಿರಿ.**

| | | |
|---|---|---|
| 1) | ವಿಶ್ವ – ಮಾತು | |
| 2) | ತಾರೆ – ಪ್ರಪಂಚ | |
| 3) | ದಯೆ – ನಕ್ಷತ್ರ | |
| 4) | ನಿರ್ಭಿತ – ತಲೆ | |
| 5) | ಮಸ್ತಕ – ಕರುಣೆ | |
| 6) | ನುಡಿ – ಭಯಮುಕ್ತ | |

111 **ಈ ಪದಗಳಿಗೆ ಭಾವನಾಮ ರೂಪವನ್ನು ಬರೆಯಿರಿ.**

ಉದಾ;– ಸ್ವತಂತ್ರ – ಸ್ವಾತಂತ್ರ್ಯ

(1) ವಿಶಾಲ = ______________ (2) ನವೀನ = ______________

(3) ಕಠಿಣ = ______________ (4) ಕರುಣ = ______________

(5) ಮಧುರ = ______________

## ಅಭ್ಯಾಸ ಹಾಳೆ –5

**□ ಕೊಟ್ಟಿರುವ ವಾಕ್ಯಗಳಲ್ಲಿರುವ ತಪ್ಪನ್ನು ಸರಿಪಡಿಸಿ ಬರೆಯಿರಿ**

1. ಅಕ್ಕಿ ಹಕ್ಕಿಯನ್ನು ತಿನ್ನುತ್ತಿದೆ.

___________________________________

2. ಅನ್ನ ಅಣ್ಣವನ್ನು ಉನ್ನುತ್ತಾನೆ.

___________________________________

3. ಬಾಲೆಯ ಹಣ್ಣನ್ನು ಬಾಳೆಯು ತಿಂದಳು.

___________________________________

4. ನಮ್ಮ ಸಾಲೆಯ ಆಸಾ ಹಶುರು ಬನ್ನದ ಪುಸ್ತಕ ತಂದಿದ್ದಾಳೆ.

___________________________________

☞ **ನಿಮ್ಮ ಶಾಲೆಯಲ್ಲಿ ಆಚರಿಸಿದ 'ಸ್ವಾತಂತ್ರ್ಯ ದಿನಾಚಾರಣೆ' ಯ ಬಗ್ಗೆ ಮಾತುಗಳಲ್ಲಿ ಬರೆಯಿರಿ.**

☞ **ಶಿಕ್ಷಕರು ಕವಿತೆಯೊಂದನ್ನು ಆಯ್ಕೆ ಮಾಡಿ, ಧ್ವನಿಸುರುಳಿ ಮೂಲಕ ಮಕ್ಕಳಿಗೆ ಕೇಳಿಸುವುದು.**

ಅದರ ಸಾರಾಂಶವನ್ನು ವಿದ್ಯಾರ್ಥಿಗಳು ತಮ್ಮ ಮಾತುಗಳಲ್ಲಿ ಬರೆಯಲು ತಿಳಿಸುವುದು

1 ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1) ಧ್ರುವತಾರೆ ಎಂದು ಕವಿ ಯಾರನ್ನು ಕರೆಯುತ್ತಾರೆ?

______________________________

2) ಕವಿಯು, ಬಾಳು ಹೇಗಿರಬೇಕೆಂದು ಆಶಿಸಿದ್ದಾರೆ?

______________________________

3) ಕವಿಯು ಸಂಪ್ರದಾಯದ ಅನಿಷ್ಟ ರೂಢಿ ನಿಯಮಗಳನ್ನು ಏನೆಂದು ಕರೆಯುತ್ತಾರೆ?

______________________________________________

2 ಕವಿಯು ಆಶಯದಂತೆ ಸ್ವಾಂತ್ರ್ಯದ

"ಸ್ವಾತಂತ್ರ್ಯದ ಸ್ವರ್ಗ" ಎಂದರೇನೆಂಬುದನ್ನು ನಿಮ್ಮ ಮಾತುಗಳಲ್ಲಿ ಅಭಿವ್ಯಕ್ತಪಡಿಸಿ,

______________________________________________

______________________________________________

______________________________________________

______________________________________________

______________________________________________

ತರಗತಿ: 7 ಪೂರಕ ಪಾಠ: ಬಸವಣ್ಣನವರ ಜೀವನ ದರ್ಶನ

| ಕ್ರ ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| | ಸೆಪ್ಟಂಬರ್ 4 ನೇ ವಾರ | ಬಸವಣ್ಣನವರ ಬಾಲ್ಯ ಜೀವನದ ಬಗ್ಗೆ ತಿಳಿಯುವರು<br><br>*ಬಸವಣ್ಣನವರ "ಕಾಯಕ" ತತ್ವದ ಬಗ್ಗೆ ಅರಿಯುವರು | **ಚಟುವಟಿಕೆ 1**<br>ಕೃತಿಕಾರರ ಪರಿಚಯ;<br>ಡಾ. ಎಲ್.ಬಸವರಾಜುರವರ ಪರಿಚಯ ಮಾಡಿಕೊಡುವುದು<br>*ಶಿಕ್ಷಕರು ಮಕ್ಕಳಿಂದ ಪೂರಕ ಪಾಠವನ್ನು ಓದಿಸುವರು.<br>**ಚಟುವಟಿಕೆ 2**<br>*ಪ್ರಶ್ನೋತ್ತರಗಳ ಮೂಲಕ ಬಸವಣ್ಣನವರ ಬಾಲ್ಯದ ಬಗ್ಗೆ ತಿಳಿಸುವರು<br>1 ಬಸವಣ್ಣನವರ ತಂದೆ , ತಾಯಿಯವರ ಹೆಸರೇನು?<br><br>2 ಬಸವಣ್ಣನವರು ಎಲ್ಲಿ ಜನಿಸಿದರು?<br><br>ಶಿಕ್ಷಕರು ಮತ್ತು ಮಕ್ಕಳು ಬಸವಣ್ಣನವರು ಬಿಜ್ಜಳದಲ್ಲಿ ಕೋಶಾಧಿಕಾರಿಗಳಾಗಿ, ಜನಾನುರಾಗಿ ಕೆಲಸ ಕಾರ್ಯಗಳಲ್ಲಿ ತೊಡಗಿರುವುದರ ಬಗ್ಗೆ ಚಿತ್ರಗಳನ್ನು ಸಂಗ್ರಹಿಸಿ ಚರ್ಚಿಸುವರು<br><br>**ಚಟುವಟಿಕೆ;**<br>'ಕಾಯಕವೇ ಕೈಲಾಸ' ಇದನ್ನು ವಿವರಿಸಿ. | ಅವಲೋಕನ .<br>ಅವಲೋಕನ ಪಟ್ಟಿ.<br><br>ಪ್ರಶ್ನೋತ್ತರ<br><br>ಚರ್ಚೆ |

| | | | | |
|---|---|---|---|---|
| | | ಬಸವಣ್ಣನವರ ಕಾಯಕ ತತ್ವವನ್ನು ತಿಳಿಯುವರು | **ಚಟುವಟಿಕೆ**<br><br>ಬಸವಣ್ಣನವರ ವಚನಗಳನ್ನು ಸಂಗ್ರಹಿಸಿ<br>ಕಾಯಕ ತತ್ವದ ಬಗೆಗೆ ತಿಳಿಸಿ. | ಯೋಜನೆ<br>ನಿಯೋಜಿತ ಕಾರ್ಯ<br><br>ನಿಯೋಜಿತ ಕಾರ್ಯ |
| | | ಬಸವಣ್ಣನವರ ಸಾಹಿತ್ಯ ತಿಳಿಯುವರು | **ಚಟುವಟಿಕೆ;**<br>ಹೊಸ ಪದಗಳ ಅರ್ಥ<br>ಸದ್ವಿಪ್ರ – ಉತ್ತಮ ಬ್ರಾಹ್ಮಣ<br>ಕಾರಣಿಕ ಕಾಲಾಧೀನ<br>ಕಾಯಕ | ನಿಯೋಜಿತ ಕಾರ್ಯ<br>ಅವಲೋಕನ |
| | | ಹೊಸ ಪದಗಳ ಅರ್ಥ ತಿಳಿಯುವರು | ತಿಳಿಯಗ್ಗವಣಿ ಇತ್ಯಾದಿ ಪದಗಳ ಅರ್ಥವನ್ನು ತಿಳಿಯಿರಿ.<br>• ಬಸವಣ್ಣನವರ ಸಾಮಾಜಿಕ ಸುಧಾರಣೆಯ ಬಗ್ಗೆ , ಅವರ ವಚನಗಳನ್ನು ಬಳಸಿ ಅರ್ಥೈಸುವುದು , ಚರ್ಚಿಸುವುದು.<br>ಉದಾ; ಅಂತರ್ಜಾತಿ ವಿವಾಹ , ಮೂಢನಂಬಿಕೆ | ಅವಲೋಕನ ಪಟ್ಟಿ |
| | | *ಸಾಮಾಜಿಕ ಸುಧಾರಣೆಗಳ ಬಗ್ಗೆ ತಿಳಿಯುವರು | **ಚಟುವಟಿಕೆ**<br>*ಎಲ್ ಬಸವರಾಜುರವರು ಸಂಪಾದಿಸಿರುವ ‘ ಬಸವಣ್ಣನವರ ವಚನಗಳು ‘ ಕೃತಿಯನ್ನು ಓದಿರಿ.<br>ಸೂಚನೆ; ಶಿಕ್ಷಕರು ಮೇಲಿನ ಚಟುವಟಿಕೆಗಳಿಗಿಂತಲೂ ಭಿನ್ನ , ಪರಿಣಾಮಕಾರಿಯಾದ ಚಟುವಟಿಕೆಗಳನ್ನು ಹಮ್ಮಿಕೊಳ್ಳಬಹುದಾಗಿದೆ.<br>ಬಸವಣ್ಣನವರ ವಚನಗಳನ್ನು ಸಂಗ್ರಹಿಸಿ ಮಕ್ಕಳಿಂದ ವಾಚನ ಮಾಡಿಸುವುದು. | |

**7 ನೇ ತರಗತಿ** **ಕನ್ನಡ** **ಅಭ್ಯಾಸ ಹಾಳೆ–7**

**1 ಈ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1 ಬಸವಣ್ಣನವರ ಜನ್ಮಸ್ಥಳ ಯಾವುದು ?

______________________________

2 ಬಸವಣ್ಣನವರ ತಂದೆ–ತಾಯಿ ಹೆಸರೇನು ?

______________________________

3 ಬಸವಣ್ಣನವರಿಗೆ ಎಷ್ಟನೇ ವಯಸ್ಸಿನಲ್ಲಿ ಉಪನಯನವಾಯಿತು ?

______________________________

4 ಕಪ್ಪಡಿ ಸಂಗಮದಲ್ಲಿರುವ ಎರಡು ನದಿಗಳನ್ನು ಹೆಸರಿಸಿ.

______________________________

5 ಬಸವಣ್ಣನವರು ಬಾಗೇವಾಡಿಯನ್ನು ಬಿಟ್ಟು ಎಲ್ಲಿಗೆ ಹೋದರು ?

______________________________

**2 "ಕಾಯಕವೇ ಕೈಲಾಸ" ಇದನ್ನು ಮೂರು–ನಾಲ್ಕು ವಾಕ್ಯಗಳಲ್ಲಿ ವಿವರಿಸಿ.**

________________________________________

________________________________________

________________________________________

________________________________________

## ಅಭ್ಯಾಸ ಹಾಳೆ –8

**1 ಈ ಪದಗಳಿಗೆ ಅರ್ಥ ಬರೆಯಿರಿ.**

1) ಸದ್ವಿಪ್ರ =
2) ಕಾಲಾಧೀನ =
3) ಕಾಯಕ =
4) ಕಾರಣಿಕ =
5) ಹೊನ್ನು =

**2 ನಿಮಗಿಷ್ಟವಾದ ಬಸವಣ್ಣನವರ ಒಂದು ವಚನವನ್ನು ಬರೆದು ವಾಚಿಸಿ.**

________________________________________

________________________________________

________________________________________